ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMIOEST(4)/20/2023

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 19.05.2023

**ಜ್ಞಾಪನ**

**ವಿಷಯ :** ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಖಾಲಿಯಿರುವ ಮುಂಬಡ್ತಿ ಹುದ್ದೆಗಳನ್ನು ಅರ್ಹ ಸಿಬ್ಬಂದಿಗಳಿಂದ ತುಂಬುವ ಕುರಿತು.

**ಉಲ್ಲೇಖ:**
1. ದಿನಾಂಕ: 07.03.2023 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿ ಮೇರೆಗೆ
2. ಈ ಕಛೇರಿ ಪತ್ರ ಸಂಖ್ಯೆ: DTE-ADMIOEST(4)/20/2023, ದಿ: 18.03.2022
3. ಮುಖ್ಯ ಚುನಾವಣಾಧಿಕಾರಿಯವರ ಕಛೇರಿ, ಕರ್ನಾಟಕ ಬೆಂಗಳೂರು ಇವರ ಪತ್ರ ಸಂಖ್ಯೆ: ಸಿಆಸುಇ 307 ಚುಸಿಅ 2023, ದಿ: 20.03.2023.
4. ತಾಂತ್ರಿಕ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: DTE-ADMIOEST(4)/6/2023/1521, ದಿನಾಂಕ: 21.03.2022
5. ತಾಂತ್ರಿಕ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: DTE-ADMIOEST(4)/16/2023/1522, ದಿನಾಂಕ: 21.03.2022
6. ಕರ್ನಾಟಕ ವಿಧಾನಸಭೆ ಚುನಾವಣೆ, 2023 - ಮಾದರಿ ನೀತಿ ಸಂಹಿತೆ.
7. ಈ ಕಛೇರಿ ಸಮಾಂಕಿತ ಜ್ಞಾಪನ ದಿನಾಂಕ: 29.03.2023

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಉಲ್ಲೇಖ(1) ರಂತೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಖಾಲಿಯಿರುವ ವಿವಿಧ ವಿಭಾಗಗಳ ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್ ಹಾಗೂ ಅಧೀಕ್ಷಕರ ಮುಂಬಡ್ತಿ ಹುದ್ದೆಗಳನ್ನು ಆಯಾ ಪೋಷಕ ವೃಂದದಲ್ಲಿನ ಅರ್ಹ ಸಿಬ್ಬಂದಿಗಳಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ದಿನಾಂಕ: 07.03.2023 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಅರ್ಹ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲು ಶಿಫಾರಸ್ಸು ಮಾಡಲಾಗಿತ್ತು. ಅದರಂತೆ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ತೀರ್ಮಾನದಂತೆ ಅರ್ಹ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಲು ಆದೇಶ ಹೊರಡಿಸಲು ಮಾನ್ಯ ಚುನಾವಣಾ ಆಯೋಗದ ಅನುಮತಿಯನ್ನು ಉಲ್ಲೇಖ(2) ರಲ್ಲಿ ಕೋರಲಾಗಿತ್ತು. ತತ್ಸಂಬಂಧ ಉಲ್ಲೇಖ(3) ರಲ್ಲಿ ಮಾನ್ಯ ಚುನಾವಣಾ ಆಯೋಗವು ಅರ್ಹ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಲು ಅಗತ್ಯ ಕ್ರಮ ಜರುಗಿಸಲು ಅನುಮತಿ ನೀಡಲಾಗಿತ್ತು. ಅದರಂತೆ ಅರ್ಹ ಸಿಬ್ಬಂದಿಗಳಿಗೆ ಉಲ್ಲೇಖ(4) ಮತ್ತು (5) ರಲ್ಲಿ ಮುಂಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಿ, ಮುಂಬಡ್ತಿ ಹುದ್ದೆಯಲ್ಲಿ ಕಾರ್ಯವರದಿ ಮಾಡಿಕೊಳ್ಳಲು 15 ದಿನಗಳ ಕಾಲಾವಕಾಶ ನೀಡಲಾಗಿತ್ತು.

ಏತನ್ಮಧ್ಯೆ ದಿನಾಂಕ: 29.03.2023 ರಂದು ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ-2023 ಘೋಷಣೆ ಸಂಬಂಧ ಮಾದರಿ ನೀತಿ ಸಂಹಿತೆ ದಿನಾಂಕ: 29.03.2023 ರಿಂದ ಜಾರಿಗೆ ಬಂದ ಕಾರಣ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ದಿನಾಂಕ: 29.03.2023 ರೊಳಗೆ ಕಾರ್ಯವಿಮುಕ್ತಿ / ಕಾರ್ಯವರದಿ ಮಾಡಿಕೊಳ್ಳದಿರುವ ಸಿಬ್ಬಂದಿಗಳನ್ನು ಮಾದರಿ ನೀತಿ

ಸಂಹಿತೆ ಜಾರಿಯಲ್ಲಿರುವವರೆಗೆ ಕಾರ್ಯವಿಮುಕ್ತಿ ಮಾಡಬಾರದಾಗಿ / ಕಾರ್ಯವರದಿ ಮಾಡಿಸಿಕೊಳ್ಳಬಾರದಾಗಿ ಉಲ್ಲೇಖ(7) ರಲ್ಲಿ ಸೂಚಿಸಲಾಗಿತ್ತು. ಪ್ರಸ್ತುತ ಮಾದರಿ ನೀತಿ ಸಂಹಿತೆ ಪೂರ್ಣಗೊಂಡಿರುವುದರಿಂದ ನಿಯಮಾನುಸಾರ ಒಂದು ವಾರದೊಳಗೆ ಮುಂಬಡ್ತಿ ಹುದ್ದೆಯಲ್ಲಿ ಕಾರ್ಯವರದಿ ಮಾಡಿಕೊಳ್ಳತಕ್ಕದ್ದು, ಇಲ್ಲವಾದಲ್ಲಿ ಬಡ್ತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆಂದು ಸೂಚಿಸಿದೆ.

**ಆಯುಕ್ತರು,**
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು.

**ಇವರಿಗೆ :-**

1. ತಾಂತ್ರಿಕ ಶಿಕ್ಷಣ ಇಲಾಖೆಯ ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ;
2. ಸಂಬಂಧಪಟ್ಟ ಸಿಬ್ಬಂದಿಗಳಿಗೆ(ಪ್ರಾಂಶುಪಾಲರ ಮುಖಾಂತರ)

**ಪ್ರತಿ**:-

1. ನೋಡಲ್ ಅಧಿಕಾರಿ, ಇ-ಆಡಳಿತ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
2. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
3. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;